ಪ್ರಬಂಧ



ಡಾ.ಜಿ.ಬಿ. ನಾಗರಾಜು ಭೈರೇನಹಳ್ಳಿ
ಕಲೆ: ಮುರಳೀಧರ್ ರಾಥೋಡ್

# ಕೂದಲ ಪುರಾಣ



‘ನಿಲ್ಲು ನೀ ನಿಲ್ಲು ನೀ ನೀಲವೇಣೀ’ ಎಂಬ ‘ಅಮರಶಿಲ್ಪಿ ಜಕಣಾಚಾರಿ’ ಚಿತ್ರದ ಹಾಡನ್ನು ಎಷ್ಟು ಜನ ಕೇಳಿದ್ದೀರಿ? ಇದರಲ್ಲಿ ನಾಯಕನು ನಾಯಕಿಯ ಜಡೆಯನ್ನು ಅರ್ಥಾತ್ ಕೂದಲನ್ನು ವರ್ಣಿಸುತ್ತಾ ಅವಳ ಮನಸ್ಸನ್ನು ಗೆಲ್ಲಲು ಪ್ರಯತ್ನಿಸುತ್ತಾನೆ. ಸೌಂದರ್ಯವನ್ನು ಹೊಗಳಿದರೆ ಒಲಿಯದಿರುವ ಹೆಂಗೆಳೆಯರಿರಬಹುದೇನೋ ಆದರೆ, ಕೇಶರಾಶಿಯ ಬಗ್ಗೆ ಹೊಗಳಿದರೆ ಕರಗದಿರುವ ಕನ್ಯೆಯರು ಯಾರಿದ್ದಾರೆ?

ನೀಲವೇಣಿ ಎಂದರೆ ಕಪ್ಪು ಕೂದಲಿನವಳು. ಆದರೆ, ನೀಳವೇಣಿ ಎಂದರೆ ಉದ್ದನೆಯ ಜಡೆಯವಳು. ನಾಗವೇಣಿ ಹಾವಿನ ಜಡೆಯವಳಾದರೆ ತ್ರಿವೇಣಿ ಮೂರು ಜಡೆಯವಳು. ಪ್ರಖ್ಯಾತ ಕಾದಂಬರಿಗಾರ್ತಿ ತ್ರಿವೇಣಿಯವರ ಮೂಲ ಹೆಸರು ಅನಸೂಯ ಶಂಕರ್. ಅವರಿಗೆ ಮೂರು ಜಡೆ ಹಾಕಿಕೊಳ್ಳುವಷ್ಟು ಕೂದಲಿದ್ದ ಕಾರಣ ‘ತ್ರಿವೇಣಿ’ ಎಂಬ ಕಾವ್ಯನಾಮ ಇಟ್ಟುಕೊಂಡಿರಬಹುದು ಎಂದು ಎಲ್ಲೋ ಓದಿದ್ದ ನೆನಪು. ನಮ್ಮ ದೇಹದಲ್ಲಿ ಎಷ್ಟೊಂದು ಜೀವಂತ ಅಂಗಗಳಿವೆ, ಅವೆಲ್ಲವನ್ನೂ ಬಿಟ್ಟು ಇದೇನು ಯಕಃಶ್ಚಿತ್ ಕೂದಲ ಬಗ್ಗೆ ಪುರಾಣವನ್ನು ಬರೆದಿದ್ದಾರೆ ಎಂಬ ಉಡಾಫೆ ಬೇಡ. ಕೂದಲಿನ ಮಹತ್ವ ಅದು ನಿರಂತರವಾಗಿ ಉದುರುತ್ತಿರುವವರಿಗೆ ಮಾತ್ರ ಗೊತ್ತಿರುತ್ತದೆ.

ಕೇಶ, ರೋಮ, ನಮಿ, ಕಚ್, ಶಿರೋಜ, ಕುಂತಲ ಮುಂತಾದ ಹೆಸರುಗಳುಳ್ಳ ಕೂದಲು ಮನುಷ್ಯನ ಬಾಹ್ಯ ಸೌಂದರ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಾತ್ರವಲ್ಲದೆ, ಕಪ್ಪಗೆ ನಳನಳಿಸುವ ಕೂದಲು ಆರೋಗ್ಯದ ಸಂಕೇತ ಕೂಡ ಹೌದು. ಮನೆಯಿಂದ ಹೊರ ಹೋಗುವಾಗ ತಲೆಯಲ್ಲಿ ಕೂದಲಿರುವವರು ತಲೆಯನ್ನು ಒಮ್ಮೆ ಕನ್ನಡಿಯಲ್ಲಿ ನೋಡಿಕೊಂಡು, ಕೆದರಿರುವ, ಮುನಿದಿರುವ ಕೂದಲನ್ನು ಬಾಚಣಿಗೆಯಿಂದ ರಮಿಸಿ, ನೀಟಾಗಿ ಬಾಚಿಕೊಂಡು ಹೊರ ಹೋಗುವುದು ಸರ್ವೇಸಾಮಾನ್ಯ. ತಲೆಯ ಬಗ್ಗೆ ಗಮನ ಕೊಡದಿರುವ, ಕೂದಲು ಕೆದರಿಕೊಂಡಿರುವ ಮನುಷ್ಯನ ಸ್ಥಿತಿ ಯಾವುದೋ ಸಮಸ್ಯೆಯನ್ನು ಅಥವಾ ಜಗಳವನ್ನು ಸೂಚಿಸುತ್ತಿದ್ದರೆ, ಒಪ್ಪವಾಗಿ